ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :-

ಅ) 370

ಆ) 370

ಇ) 1) ಪಟ್ಟಣ ಪ್ರದೇಶಕ್ಕೆ ಶೇಕಡ 70
2) ಗ್ರಾಮಾಂತರ ಪ್ರದೇಶಕ್ಕೆ ಶೇಕಡ 70
3) ಬಾಂಬೆ ಕರ್ನಾಟಕ ಪ್ರದೇಶಕ್ಕೆ ಶೇಕಡ 25

ಈ) ಇಲ್ಲ.

ಉ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ :- ಬೆಂಗಳೂರು ನಗರದಲ್ಲಿರುವ ವಿಕ್ಟೋರಿಯ, ಬೌರಿಂಗ ಮತ್ತು ಇತರೆ ಆಸ್ಪತ್ರೆಗಳ ಸಂದರ್ಶನ ಸಮಿತಿಗಳನ್ನು ಪುನರ್ ರಚನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 776 (971)

ಎನ್. ರಾಜಣ್ಣ (ಭಾರತೀನಗರ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರವು ಬೆಂಗಳೂರಿನಲ್ಲಿರುವ ವಿಕ್ಟೋರಿಯಾ, ಬೌರಿಂಗ್, ಕೆ.ಸಿ. ಜನರಲ್ ಮತ್ತು ವಾಣಿ ವಿಲಾಸ ಆಸ್ಪತ್ರೆಗಳಿಗೆ ಸಂದರ್ಶನ ಸಮಿತಿಗಳನ್ನು ಪುನರ್ ರಚಿಸಿದೆಯೇ?

ಆ) ಪುನರ್ ರಚನೆ ಮಾಡದಿದ್ದಲ್ಲಿ, ಈ ಸಂದರ್ಶನ ಸಮಿತಿಗಳನ್ನು ಯಾವಾಗ ಪುನರ್ ರಚನೆ ಮಾಡಲಾಗುವುದು?

ಡಾ. ಹೆಚ್. ಜಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಹೌದು.

ಆ) ಉದ್ಭವಿಸುವುದಿಲ್ಲ.

ವಿಷಯ :- ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 777 (972)

ಶ್ರೀ ಎನ್. ರಾಜಣ್ಣ (ಭಾರತೀನಗರ) :- ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ವೈದ್ಯಕೀಯ ಕಾಲೇಜುಗಳೆಷ್ಟು?

2) 1995 ನೇ ಸಾಲಿನಲ್ಲಿ ಸರ್ಕಾರದಿಂದ ಸದರಿ ವಿಶ್ವವಿದ್ಯಾನಿಲಯಕ್ಕೆ ಸರ್ಕಾರವು ನೀಡಿದ ಹಣವೆಷ್ಟು?

3) 1996-97 ನೇ ಸಾಲಿನಲ್ಲಿ ಸದರಿ ವಿಶ್ವವಿದ್ಯಾನಿಲಯಕ್ಕೆ ನೀಡಲು ಉದ್ದೇಶಿಸಿರುವ ಹಣವೆಷ್ಟು?

4) ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದಿಂದ ಅನುದಾನ ಪಡೆಯಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೇ?

5) ಹಾಗಿದ್ದಲ್ಲಿ ವಿವರಗಳನ್ನು ನೀಡುವುದು?

ಡಾ. ಎಂ. ಶಂಕರ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :-

1) 17 **ಕಾಲೇಜುಗಳು. (ಪಟ್ಟಿ ಲಗತ್ತಿಸಿದೆ)**

2) **ರೂ.** 25 **ಲಕ್ಷಗಳು**

3) 1996-97 **ನೇ ಸಾಲಿನಲ್ಲಿ ಆಯ್ಕೆಯ ಯೋಜನೆಯಲ್ಲಿ ಒಂದು ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.**

4 & 5) **ಆರೋಗ್ಯ ವಿಶ್ವವಿದ್ಯಾನಿಲಯಗಳು ವಿಶ್ವ ವಿದ್ಯಾನಿಲಯದ ಧನ ಸಹಾಯ ಯೋಜನೆಯಡಿಯಲ್ಲಿ ಬರುವುದಿಲ್ಲ. ಆದಾಗ್ಯೂ ಆರೋಗ್ಯ ವಿಶ್ವವಿದ್ಯಾನಿಲಯಗಳನ್ನು ಯು.ಜಿ.ಸಿ. ಅನುದಾನ ಯೋಜನೆಯಡಿಯಲ್ಲಿ ತಂದು ಆಯೋಗದ ಮುಖಾಂತರ ಅನುದಾನ ಬಿಡುಗಡೆ ಮಾಡುವಂತೆ ಭಾರತ ಸರ್ಕಾರವನ್ನು ಆಯೋಗವು ಕೋರಿದೆ.**

NAME AND ADDRESS OF THE MEDICAL COLLEGES IN KARNATAKA

1. Bangalore Medical College, Bangalore - 560002.
2. Government Medical College, Mysore - 570071.
3. Karnataka Medical College, Hubli.
4. Government Medical College, Bellary.
5. J.J.M. Medical College, Davangere - 577004.
6. J.N. Medical College, Belgaum - 590010.
7. M.R. Medical College, Gulbarga.
8. J.S.S. Medical College, Mysore - 570015.

9. Al-Ameem Medical College, Bijapur - 586101.
10. Adi Chunchanagiri Institute of Medical Sciences, Balagangadharanagar - 571448, Nagamangala Taluk, Mandya District.
11. Sri Devaraj Urs Medical College, Tamaka, Kolar.
12. Sri Siddartha Medical College, Tumkur.
13. Kempegowda Institute of Medical Sciences, K.R. Road, Bangalore.
14. Dr. B.R. Ambedkar Medical College, Kadugondanahalli, Bangalore.
15. B.L.D.E.A. Medical College, Bijapur - 586103.
16. M.S. Ramaiah Medical College, Bangalore.
17. St. John's Medical College, Bangalore.

ವಿಷಯ :- ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರುಗಳ ಹಾಗೂ ಸಹ ಉಪಾಧ್ಯಾಯರ ವೇತನದಲ್ಲಿರುವ ತಾರತಮ್ಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 778 (857)

ಶ್ರೀ ಎ. ರಾಮದಾಸ್ (ಕೃಷ್ಣರಾಜ) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರ ಹಾಗೂ ಸಹ ಉಪಾಧ್ಯಾಯರ ವೇತನದಲ್ಲಿ ತಾರತಮ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :-

ಅ) ಬಂದಿದೆ.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ :- ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರತಕ್ಕ ವೈದ್ಯರುಗಳ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 782 (744)

ಶ್ರೀ ಡಿ. ವಿ. ಸದಾನಂದಗೌಡ, (ಪುತ್ತೂರು) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?